ದಾವಣಗೆರೆ ಜಿಲ್ಲೆಯ ಜಾತ್ರೆಗಳು ಮತ್ತು ಜಾನಪದ ಕಲೆಗಳು: ಒಂದು ಅಧ್ಯಯನ

ಶ್ರೀ ಹಿರೇಮಠ I.S
ಸಂಶೋಧಕರು
ಕನ್ನಡ ಅಧ್ಯಯನ ವಿಭಾಗ
ದ್ರಾವಿಡಿಯನ್ ವಿಶ್ವವಿದ್ಯಾಲಯ ಶ್ರೀನಿವಾಸವನಮ್: ಕುಪ್ಪಾಮ

ಡಾ. ಕೆ. ಶಾರದಾ
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ದ್ರಾವಿಡಿಯನ್ ವಿಶ್ವವಿದ್ಯಾಲಯ
ಕುಪ್ಪಾಮ, ಚಿತ್ತೂರು (ಜಿಲ್ಲೆ)

ಸಾರಾಂಶ

ಪ್ರಸ್ತುತ ಅಧ್ಯಯನವು **"ದಾವಣಗೆರೆ ಜಿಲ್ಲೆಯ ಜಾತ್ರೆಗಳು ಮತ್ತು ಜಾನಪದ ಕಲೆಗಳು ಒಂದು ಅಧ್ಯಯನ"** ಈ ಅಧ್ಯಯನವು ದಾವಣಗೆರೆ ಜಿಲ್ಲೆಯ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳ ಗಡಿ ಹೊಂದಿದ್ದು ಬಹುತೇಕವಾಗಿ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರಭಾವವು ಹೆಚ್ಚಾಗಿದೆ. ಆದ್ದರಿಂದ ಜಾತ್ರೆಗಳ ಕಾಲ, ಇತಿಹಾಸ, ಐತಿಹ್ಯ, ಪುರಾಣ, ನಂಬಿಕೆ, ಆರಾಧನೆ, ಆಚರಣೆ, ಸಂಪ್ರದಾಯಗಳು, ಜಾನಪದ ಸಾಹಿತ್ಯ, ಜಾನಪದ ಕಲೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನ ಗ್ರಾಮೀಣ ಜೀವನದಲ್ಲಿ ಧರ್ಮಸಮನ್ವಯತೆ, ಆಚಾರ ವಿಚಾರ ಮನರಂಜನೆ, ಆರಾಧನೆ, ಸಾಂಸ್ಕೃತಿಕ ವೈಭವೀಕರಣಕ್ಕಾಗಿ "ಅನಾದಿ ಕಾಲದಿಂದ ಹಾಸು ಹೊಕ್ಕಾಗಿರುವ ಜಾತ್ರೆಗಳು ಜನಪದರ ಬದುಕಿನ ಭಾಗವಾಗಿದ್ದು, ಇವು ಜನಪದ ಸಂಸ್ಕೃತಿಯ ಅರ್ಥವ್ಯವಸ್ಥೆಯಲ್ಲಿ, ಸಾಮಾಜಿಕ ಸ್ಥಿತಿಗತಿಗಳಲ್ಲಿ ಪ್ರಭಾವ ಬೀರುತ್ತಾ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು, ಜನಪದಕಲೆಗಳನ್ನು ಮೆರೆಸಿ ಕಲಾತ್ಮಕ ಬದುಕಿನೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಾ ಸಾಂಸ್ಕೃತಿಕ ವೈಭವೀಕರಣದೊಂದಿಗೆ ಹೆಚ್ಚು ಮಹತ್ವ ಪಡೆಯುತ್ತವೆ.

ಪ್ರಮುಖ ಪದಗಳು: ಜಾನಪದ ಕಲೆಗಳು ಮತು ಜಾತ್ರೆಗಳು

ಪೀಠಿಕೆ

ದಾವಣಗೆರೆ ಜಿಲ್ಲೆಯು ಕರ್ನಾಟಕದ ಮಧ್ಯಬಿಂದುವೂ, ಉತ್ತರ ಕರ್ನಾಟಕ, ಹಳೇ ಮೈಸೂರು ಪ್ರಾಂತ್ಯಗಳ ಭಾವನಾತ್ಮಕ ಬೆಸುಗೆ ಹೊಂದಿರುವ ಹರಿಹರರ ನೆಲೆವೀಡಾಗಿದೆ. ಧಾರ್ಮಿಕ, ಸಾಂಸ್ಕೃತಿಕ, ಐತಿಹಾಸಿಕ, ಶೈಕ್ಷಣಿಕ, ರಾಜಕೀಯ, ಸಾಹಿತ್ಯ, ಧಾನ ಧರ್ಮಗಳ ವಾಣಿಜ್ಯ, ನೀರಾವರಿ ಸೌಲಭ್ಯಗಳ, ಫಲವತ್ತಾದ ಭೂ ಭಾಗದ ಕೈಗಾರಿಕೆಗಳ ಹೆಗ್ಗಳಿಕೆಯ ನಗರ, ಅನೇಕ ಪ್ರಶಸ್ತಿಗಳಿಸಿದ. ವೈದ್ಯರ ಸೇವೆಗೆ ಹೆಸರಾದ ನಗರವಾಗಿದೆ. ಜಗತ್ತಿನಲ್ಲಿ ವಿಸ್ಮಯ ಮೂಡಿಸುವ, ಭವ್ಯ ಇತಿಹಾಸ ಪರಂಪರೆ ಹೊಂದಿದ, ಮ್ಯಾಂಚೆಸ್ಟರ್ ಸಿಟಿ ಎನಿಸಿದ ದಾವಣಗೆರೆಯು ಅನೇಕ ಮುತ್ಸದ್ದಿ ರಾಜಕಾರಣಿಗಳಾದ ದಿ. ಜೆ ಹೆಚ್ ಪಟೇಲ್, ದಿ. ಎಸ್ ನಿಜಲಿಂಗಪ್ಪ, ದಿ. ಜೆ ಇಮಾಂ ಸಾಬ್, ದಿ. ಗಾಂವಿ ವೀರಪ್ಪ, ದಿ. ಸಿದ್ಧವೀರಪ್ಪ, ದಿ. ಕೊಂಡಜ್ಜಿ ಬಸಪ್ಪ, ಕ್ರಾಂತಿಕಾರಿ ದಿ. ಪಂಪಾಪತಿ, ಕೆ ಟಿ ಜಂಬಣ್ಣ ಮೊದಲಾದವರ ಕರ್ಮಭೂಮಿಯೂ ಆಗಿದ್ದು ೧೫-೮-೧೯೭೭ರಲ್ಲಿ ಜಿಲ್ಲೆಯ ಅಸ್ತಿತ್ವ ಪಡೆಯಿತು. "ಇತಿಹಾಸ ಪುಟದಲ್ಲಿ ತನ್ನದೇ ಛಾಪು ಮೂಡಿಸಿದ ದಾವಣಗೆರೆ ಜಿಲ್ಲೆಯು ಬಿಚ್ಚುಗತ್ತಿ ಭರಮಣ್ಣ ನಾಯಕ, ಆನೆಗುಂದಿಯಿಂದ ಬಂದು ಹರಪನಹಳ್ಳಿ ತಾಲೂಕು ಉಚ್ಚಂಗಿದುರ್ಗದಲ್ಲಿ ಪಾಳೆಪಟ್ಟು ಸ್ಥಾಪಿಸಿದ. ಪಾಂಡ್ಯರು ಹರಪನಹಳ್ಳಿ ಪಾಳೇಗಾರರು, ಬೆಳಗುತ್ತಿ ನಾಯಕರು, ಬಿಳಿಚೋಡಿನ ಬಿಚ್ಚುಗತ್ತಿ ಭರಮಣ್ಣ ನಾಯಕ, ಮತ್ತಿಯ ತಿಮ್ಮಣ್ಣ ನಾಯಕ ಮೊದಲಾದ ಮನೆತನಗಳೂ ನಮ್ಮ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿವೆ. ಅಲ್ಲದೇ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದ್ದು ಈ ಎಲ್ಲಾ ಮನೆತನಗಳ ಶಿಲಾಶಾಸನೆ ಲೋಹ ಶಾಸನ, ಮೂರ್ತಿ ಶಿಲ್ಪ, ಕೋಟೆ ಕೊತ್ತಲಗಳು, ಸಮಾಧಿ-ಯುದ್ಧ ಭೂಮಿ, ದೇವಾಲಯಗಳುಇಂದಿಗೂ ಉಳಿದಿವೆ. ಕರ್ನಾಟಕ ಆಳಿದ ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ಸೇವುಣರು, ಮೌರ್ಯರು, ಮೈಸೂರು ಅರಸರು, ಹೈದರಾಲಿ, ಚಿತ್ರದುರ್ಗ ಪಾಳೆಗಾರರು ಮೊದಲಾದವರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ.

ಜಾತ್ರೆಗಳು ಮತ್ತು ಜಾನಪದ ಕಲೆಗಳು

ಜಾತ್ರೆಗಳು ಮತ್ತು ಜಾನಪದ ಕಲೆಗಳಿಗೆ ನಿಕಟ ಸಂಬಂಧವಿದೆ. ಅದೇ ರೀತಿ ಸಮುದಾಯ, ಸಂಸ್ಕೃತಿಗಳ ಪ್ರತೀಕಗಳಾಗಿ ವ್ಯಕ್ತಿಯಿಂದ ಸೃಷ್ಠಿಯಾಗಿ ಸಮುದಾಯದ ಸ್ವತ್ತಾಗಿ ಸಂವಹನಕ್ಕೆ ಆಧಾರವಾಗಿ "ಜನರಿಂದ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳಾಗಿವೆ."

ಅಧ್ಯಯನದ ವಿಧಾನ

ಜಾತ್ರೆಗಳು, ಹಬ್ಬಗಳು ನಮ್ಮ ಸಂಪ್ರದಾಯದ ಒಂದು ಪ್ರಮುಖ ಭಾಗವಾಗಿದ್ದು ಇಲ್ಲಿ ಹಲವು ಸಂಕೀರ್ಣ ಆಚರಣೆಗಳು ಕಂಡು ಬರುತ್ತವೆ. ಜಾತ್ರೆ ನಡೆಯುವ ಸ್ಥಳಗಳು, ದೈವಗಳ ಪ್ರಭಾವ, ಜನಪದ ಕಲೆ, ವೃತ್ತಿಗಾಯಕರು (ಜೋಗಪ್ಪ-ಜೋಗಮ್ಮ, ದಾಸಪ್ಪ- ದಾಸಮ್ಮ, ದ್ವಾರಪ್ಪ-ಗ್ವಾರಮ್ಮ) ಮೊದಲಾದವರೊಂದಿಗೆ ಮೌಖಿಕ ಸಾಹಿತ್ಯ ಸಂಗ್ರಹಣೆಗೆ ಪ್ರಯತ್ನಿಸಲಾಗಿದೆ. ಜಾತ್ರೆಗಳಲ್ಲಿನ ವಿವಿಧ ಸಾಂಸ್ಕೃತಿಕ ಆಚರಣೆಗಳ, ವಿಧಿ ವಿಧಾನಗಳ ಭಕ್ತರ ಪಾಲ್ಗೊಳ್ಳುವಿಕೆಯ, ಜಾತ್ರೆ ನಡೆಸುವ ವ್ಯವಸ್ಥಾಪಕ ಸಮಿತಿಯವರ, ವಿವಿಧ ರೀತಿಯ ಭಕ್ತರ, ಜಾತ್ರೆಗಳ ಮೇಲ್ವಿಚಾರಕರ, ಮನೋರಂಜನಾ ಸಾಧನಗಳ ವ್ಯಾಪಾರಿಗಳ, ದನಕರುಗಳ ಮಾರಾಟಗಾರರ, ಕೊಂಡು ಕೊಳ್ಳುವವರ, ವಿವಿಧ ಹರಕೆ ಹೊತ್ತವರ, ಭಿಕ್ಷುಕರ, ಪುರೋಹಿತರ, ಜಂಗಮರ ಮೊದಲಾದವರ ಪಾತ್ರ ಮತ್ತು ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಈ ನಿಮಿತ್ತ ಕ್ಷೇತ್ರಕಾರ್ಯ ಕೈಗೊಂಡು ಜಾತ್ರೆಗಳಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡು ಪರೋಕ್ಷವಾಗಿ ಕೇಳಿ, ಓದಿ ತಿಳಿದು ಇಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

ಜಾತ್ರೆಗಳ ಅಧ್ಯಯನವು ಪ್ರಾಚೀನ ಕಾಲದಿಂದಲೂ ವ್ಯವಸ್ಥಿತವಾಗಿ ನಡೆದಿಲ್ಲ. ಕೆಲವು ದಶಕಗಳಿಂದ ಆರಂಭವಾಗಿದ್ದು ದಾವಣಗೆರೆ ಜಿಲ್ಲೆಯ ಜಾತ್ರೆಗಳ ಸಮಗ್ರ ಅಧ್ಯಯನ ನಡೆದಿಲ್ಲ. ಆದ್ದರಿಂದ ಇಲ್ಲಿ ಆಳವಾದ ಅಧ್ಯಯನಕ್ಕೆ ಪ್ರಯತ್ನಿಸಲಾಗಿದೆ. ಈ ಜಿಲ್ಲೆಯು ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳ ಗಡಿ ಹೊಂದಿದ್ದು ಬಹುತೇಕವಾಗಿ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರಭಾವವು ಹೆಚ್ಚಾಗಿದೆ. ಆದ್ದರಿಂದ ಜಾತ್ರೆಗಳ ಕಾಲ, ಇತಿಹಾಸ, ಐತಿಹ್ಯ, ಪುರಾಣ, ನಂಬಿಕೆ, ಆರಾಧನೆ, ಆಚರಣೆ, ಸಂಪ್ರದಾಯಗಳು, ಜಾನಪದ ಸಾಹಿತ್ಯ, ಜಾನಪದ ಕಲೆಗಳು -ಹೀಗೆ ಪ್ರತ್ಯೇಕವಾಗಿ ಅಭ್ಯಾಸ ಮಾಡಲಾಗಿದೆ. ಇಲ್ಲಿನ ಧಾರ್ಮಿಕ ವಿಚಾರಗಳು ಬಹು ಸೂಕ್ಷ್ಮವಾಗಿದ್ದು ವಿಶಿಷ್ಟವೂ ಆಗಿದ್ದು ಮನುಷ್ಯನ ಕಲ್ಪನೆಗೆ ತಕ್ಕಂತೆ ಎಷ್ಟೋ ಬದಲಾವಣೆ ಹೊಂದುತ್ತಾ ನಿಗೂಢತೆಯ ಮುಸುಕನ್ನು ಹಾಕಿದೆ. ಈ ಕುರಿತಾಗಿ ಸಂಶೋಧನೆ ಮಾಡುವಾಗ ಸಂಶೋಧನೆಯ ವಿಶೇಷ ಜ್ಞಾನವೂ ಬೇಕಾಗುವುದು. ಈ ನಿಟ್ಟಿನಲ್ಲಿ ನಮ್ಮ ಜಿಲ್ಲೆಯ ಹಲವು ದೇವಾಲಯಗಳನ್ನು ಅವು ಜನ ಜೀವನದಲ್ಲಿ ಹಾಸು ಹೊಕ್ಕಾಗಿರುವ ಪ್ರಭಾವವನ್ನು ಅಭ್ಯಾಸಿಸಬೇಕಾಯಿತು. ಇಡೀ ಜಿಲ್ಲೆಯಲ್ಲಿ ಪ್ರಮುಖ ದೇವಾಲಯಗಳ ಮಹತ್ವ ಪೂರ್ಣ ವಿಚಾರ ಸಂಗ್ರಹಿಸಲಾಗಿದೆ.

ದಾವಣಗೆರೆ ಜಿಲ್ಲೆಯ ಜಾನಪದ ಕಲೆಗಳು

ಜಾನಪದ ಕಲೆಗಳು ನೂರಾರು ಅವು ಕೆಲವೊಮ್ಮೆ ಮಾರ್ಪಡುತ್ತವೆ. ನಶಿಸುತ್ತವೆ. ಜೀವಂತಿಕೆ ಪಡೆಯುತ್ತವೆ. ಸರ್ವರ ಮನಸ್ಸನ್ನು ಆಕರ್ಷಿಸಿ ಭಾವೈಕ್ಯತೆ ಸಾಧಿಸಲು, ಸಂಸ್ಕೃತಿ ಪ್ರಸಾರ ಮಾಡಲು ಆಧಾರಸ್ತಂಭಗಳಾಗಿವೆ. ಜಾನಪದ ಕಲೆಗಳ ವರ್ಗಿಕರಣ ಅಷ್ಟು ಸುಲಭವಲ್ಲ. ಅವು ನೃತ್ಯ ಆಧಾರಿತ, ಕುಣಿತ ಆಧಾರಿತ, ಆರಾಧನೆ ಆಧಾರಿತ, ಆಚರಣೆ ಆಧಾರಿತೆ, ಮನರಂಜನೆ ಆಧಾರಿತ, ಹಾಡು ಆಧಾರಿತ ಎಂದು ವೀಕ್ಷಿಸಬಹುದಾಗಿದ್ದು, ಜಾತ್ರೆಗಳಲ್ಲಿ ಹೆಚ್ಚು ಹುಮ್ಮಸ್ಸು ಮೂಡಿಸುತ್ತವೆ. "ಜನಪದರು ಹರಕೆ ರೂಪದಲ್ಲಿ ತಮ್ಮ ಜನಪದ ಕಲೆಗಳನ್ನು ಪ್ರದರ್ಶನ ಮಾಡುತ್ತಾರೆ. ಬರುಬರುತ್ತಾ ಭಕ್ತಿ ಆವೇಶದಿಂದ ಸ್ಪರ್ಧೆಗೆ ಇಳಿವುದು ಹೆಚ್ಚು ಹೆಚ್ಚು ಜನ ಸೇರಿದಾಗ ಸ್ಫೂರ್ತಿ ನೀಡಿದಾಗ, ನೂರು ಇನ್ನೂರು ನೋಟುಗಳನ್ನು ಅಂಟಿಸಿದಾಗಲಂತೂ (ಬಹುಮಾನ ಪ್ರದರ್ಶನ) ಎಲ್ಲೆ ಮೀರುತ್ತವೆ. "ಜನಪದ ಕಲೆಗಳು ಧಾರ್ಮಿಕ ಪರಿಸರ ಮತ್ತು ಮಿತೀಯ ವಲಯ ದಾಟಿ ಸ್ಪಂದಿಸುತ್ತಿದ್ದು, ನಮ್ಮ ಸಾಂಸ್ಕೃತಿಕ ಹಿರಿಮೆಯನ್ನು ತಂದು ಕೊಡುತ್ತವೆ.". ಮನುಷ್ಯ ಹುಟ್ಟಿನೊಂದಿಗೆ ಅವನ ಸಂಸ್ಕೃತಿ ವಿಕಾಸಗೊಂಡಂತೆ ಅವನ ದೈವಾರಾಧನೆ ಪ್ರಜ್ಞೆ ಬೆಳೆದು ಧಾರ್ಮಿಕತೆಯನ್ನು ಪ್ರಚೋದಿಸುವ ಕಲಾರೂಪಗಳು ಆವಿಷ್ಕಾರಗೊಂಡಿವೆ. ಕಲಾವಿದರು ಮತ್ತು ಪ್ರೇಕ್ಷಕರು ಕಲೆಗಳ ಪ್ರದರ್ಶನದಲ್ಲಿ ಒಟ್ಟಾಗಿ ಸಮಾಧಾನ ಸಂತೃಪ್ತಿ ಅನುಭವಿಸುವ ಮಾನಸಿಕ ಉನ್ನತಿ ಸಾಧಿಸುವ, ಕೋಮು ಸೌಹಾರ್ದತೆ ಬೆಸೆಯುವಲ್ಲಿ ಜನಪದ ಕಲೆಗಳು ಸ್ತುತ್ಯಾರ್ಹವಾಗಿವೆ. ಜಾತ್ರೆಗಳ ಅಂಗವಾಗಿ ಪ್ರದರ್ಶನಗೊಳ್ಳುತ್ತಿರುವ ಜನಪದ ಕಲೆಗಳಲ್ಲಿ ದಾವಣಗೆರೆ ಜಿಲ್ಲೆಯ ಹವ್ಯಾಸಿ ಮತ್ತು ವೃತ್ತಿ ಕಲಾವಿದರು ಹಾಗೂ ಪ್ರಮುಖ ಸಾಂಸ್ಕೃತಿಕ ಜನಪದ ಕಲೆಗಳು ಮುಖ್ಯವಾಗಿವೆ. ಹವ್ಯಾಸಿ ರಂಗಭೂಮಿ ಹಾಗೂ ಹವ್ಯಾಸಿ ನಟ-ನಟಿಯರು ವೃತ್ತಿ ನಟರನ್ನು ಹಳ್ಳಿಗಳಿಗೆ ಕರೆಸಿ ನಾಟಕ ಆಡುವುದುಂಟು. ಹಾಗಾಗಿ ಹವ್ಯಾಸಿ ನಾಟಕಗಳ ಪ್ರದರ್ಶನ, ಭಜನಾ ಸ್ಪರ್ಧೆ, ಅಲಾವಿ

ಕುಣಿತ, ಪಟ್ಟದ ಕುಣಿತ, ಪೂಜಾ ಕುಣಿತ, ತಾಳವಾದ್ಯ, ಕರಡಿ ಮಜಲು, ಕೀಲು ಗೊಂಬೆ ತೊಗಲುಗೊಂಬೆ, ಕೀಲು ಕುದುರೆ, ವೀರಗಾಸೆ, ನಂದಿ ಧ್ವಜ, ನಂದಿಕೋಲು, ಡೊಳ್ಳು ಕುಣಿತ, ಸಮಾಳ, ತಮಟೆ ಮೇಳ, ಚೌಟಿಗೆ (ಚೌಡಿಕೆಮೇಳ) ಕರಪಲ್ಲವಿ, ಗೇ ಕಳ್ಳ ಗೊಂದಲಿಗರ ಮೇಳಗಳು, ಕೋಲಾಟ ತಂಡಗಳು, ತಟ್ಟಿರಾಯನ ಕುಣಿತಗಳು ಗಮನಾರ್ಹವಾಗಿವೆ. ಲಂಬಾಣಿ ಕುಣಿತ ಮತ್ತು ಹಾಡುಗಳು, ಕಿನ್ನರಿ ಜೋಗಿ, ಅಳ್ಳಳ್ಳಿ ಭಾವ ತಂಬೂರಿ ಮೇಳ, ಹಲಗೆ ಮೇಳ, ಬೆದರು ಬೊಂಬೆ, ಗೊರವರ ಕುಣಿತ, ಮೋಡಿ ಆಟ, ಸೂತ್ರದ ಗೊಂಬೆ, ಸೋಮನ ಕುಣಿತ, ಕಲ್ಕತುರಾ ಲಾವಣಿ, ಬುಡಬುಡಕೆ, ಜೋಕುಮಾರಸ್ವಾಮಿ ತಂಡ, ಗೊಂದಲಿಗರ ಮೇಳ, ಹುಲಿವೇಶ, ಪರಮೇಶ್ವರನ ವೇಶ, ಸವಾಲ್ ಪದಗಳು, ತಮಟೆ, ಬ್ಯಾಂಡು, ಭಜಂತ್ರಿ, ಸೊನಾಯ ಚೌಡಿಕೆ, ಚಂಡಮದ್ದಳೆ ಅಲ್ಲದೇ ಉಪನ್ಯಾಸ, ಕೀರ್ತನೆ, ಜಾನಪದ ನೃತ್ಯ, ಗೀತೆ, ಹಾಡುಗಳು, ಭರತನಾಟ್ಯ, ರಸಮಂಜರಿ ನೂಪುರ ನೃತ್ಯ, ಕವ್ವಾಲಿ, ಹಾಸ್ಯಗಾಯನ, ಹಾಸ್ಯ ಸಂಗೀತ, ಹಾಸೋತ್ಸವ, ವಚನ ದ್ವಿರುಕ್ತಿ, ಚಿತ್ರಗೀತೆ, ದೇಶಭಕ್ತಿಗೀತೆ, ತತ್ವಪದ, ಭಗವದ್ಗೀತೆ ವಾಚನ, ಹರಿಕಥೆ, ಗೀಗೀಪದ, ಕರಡಿಮಜಲು, ನಾಸಿಕ್, ಡೋಲ್, ಜಾಂಜ್ ಮೇಳ, ಕಲ್ಕಿ ತುರಾಯಿ ಲಾವಣಿ, ಕರಪಲ್ಲವಿ, ಹಗಲುವೇಶ, ಚಂಡಮದ್ದಳೆ, ದುಂಡಿ ಎತ್ತುವುದು, ಕಂಬ ಏರುವುದು, ಮಡಿಕೆ ಒಡೆಯುವುದು ಹೀಗೆ ಅನೇಕ ಜಾನಪದ, ಶಿಷ್ಟಪದ ಕಲೆಗಳಿಗೆ ಆರಾಧನಾ ಸ್ವರೂಪವಾಗಿ ಜಾತ್ರೆಗಳು ಜೀವಂತಿಕೆ ನೀಡುತ್ತವೆ. ಇಂತಹ ಕಲಾವಿದರಿಗೆ ಊರ ಮುಖಂಡರು ತಮ್ಮ ಊರಿನ ಜಾತ್ರೆ ರಥೋತ್ಸವದಲ್ಲಿ ಪಾಲ್ಗೊಳ್ಳಲು ವೀಳ್ಯ ನೀಡುತ್ತಾರೆ. ನಂತರ ಗೊತ್ತು ಪಡಿಸಿದ ದಿನಾಂಕಕ್ಕಿಂತ ಮುಂಚೆ ಅಥವಾ ಅದೇ ದಿನ ನಿಗದಿತ ಸಮಯಕ್ಕೆ ಇಂತಹ ಕರೆಗಳ ಸಂಗವಾಗುವುದು.

ಡೊಳ್ಳು ಕುಣಿತ: ಕರ್ನಾಟಕದ ಬಿಜಾಪುರ, ಬಳ್ಳಾರಿ, ತುಮಕೂರು, ಬೆಳಗಾವಿ, ರಾಯಚೂರು, ಗುಲಬರ್ಗಾ, ಚಿಕ್ಕಮಗಳೂರು, ಧಾರವಾಡ, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವ ಹಾಲುಮತದವರ (ಕುರುಬರು ಮತ್ತು ಎಲ್ಲಾ ಒಳ ಪಂಗಡ) ಜನಪ್ರಿಯ ವಾದ್ಯವೇ ಡೊಳ್ಳು. ಇತ್ತೀಚೆಗೆ ಎಲ್ಲಾ ದೈವಗಳ ಜಾತ್ರೆ ಉತ್ಸವಗಳಲ್ಲಿ ರಾಜಕಾರಣದ ಉತ್ಸಾಹದಲ್ಲಿ ಈ ಮೇಳ ಕಡ್ಡಾಯವಾಗಿ ಪ್ರದರ್ಶನ ನೀಡುತ್ತಿದೆ.

ಗೊರವರ ಕುಣಿತ: ಮೈಲಾರಲಿಂಗನ ಭಕ್ತರು ದೇವರಗುಡ್ಡರನ್ನು ಗೊರವಪ್ಪ ಗೊರವಯ್ಯಗಳನ್ನು ಕರೆಸಿ ದೋಣಿಸೇವೆ ಮಾಡಿಸುತ್ತಾರೆ. ಈ ಸೇವೆಯಲ್ಲಿ ಹಾಲು ಹಣ್ಣು ಇತ್ಯಾದಿ ನೈವೈದ್ಯಗಳು ಸೇರಿರುತ್ತವೆ. ಅಂಗಳದಲ್ಲಿ ಹಾಸಿದ ಕಂಬಳಿಸುತ್ತ ದೋಣಿಯಲ್ಲಿ ಹಾಕಿರುವ ಬಾಳೆಹಣ್ಣು-ಬೆಲ್ಲ, ಕೊಬ್ಬರಿ ಇತ್ಯಾದಿ ತುಂಬಿದ ದೋಣಿಯಲ್ಲಿ ತಮ್ಮ ಪರಿಕರಗಳನ್ನು ಸುತ್ತಲಿಲೂ ಇರಿಸಿ. ಆರ್ಭಟಿಸಿ ಪ್ರಾಣಿಗಳಂತೆ ಅರಚಿ-ಆನಂದ ಮನರಂಜನೆ ನೀಡಿ ತಮ್ಮ ದೋಣಿಗಳಲ್ಲಿನ ಪ್ರಸಾದ ಸ್ವೀಕರಿಸಲು ಸಿದ್ಧರಾಗಿರುತ್ತಾರೆ.

ಭಜನಾ ತಂಡಗಳು: ಕರ್ನಾಟಕ ಅನೇಕ ಶಿವಶರಣರೂ ಉದಿಸಿದ ಪುಣ್ಯಭೂಮಿ ಆಗಿದ್ದು, ಆಧ್ಯಾತ್ಮಿಕ ಶಿಖರದ ಉತ್ತುಂಗಕ್ಕೆ ಏರಿದ ಹಾಗೂ ಆಧ್ಯಾತ್ಮ ಬೋಧಿಸಿದ ಗುರುಹಿರಿಯರನ್ನು ಶಿವಶರಣರನ್ನು ನೆನೆಯುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕಾಗಿಯೋ ಜಿಲ್ಲೆಯ ಪ್ರತಿಯೊಂದು ಹಳ್ಳಿಗಳಲ್ಲಿ ಭಕ್ತಿಪೂರ್ವಕ ಭಜನೆ ಮಾಡುತ್ತಾ ಗುರುಹಿರಿಯರನ್ನು ಶಿವಶರಣರನ್ನು ಸರಿಸುತ್ತಾ ಭಕ್ತಿ ಭಾವುಕತೆಯಲ್ಲಿ ತಲ್ಲೀನರಾಗುತ್ತಾರೆ. ಯಾವುದೇ ಜಾತಿ ಭೇದಗಳಿಲ್ಲದೇ ಒಂಟಿಯಾಗಿ ಅಥವಾ ಗುಂಪಿನಲ್ಲಿ ದೇವರನ್ನು ಭಕ್ತಿಯಿಂದ ಸ್ಮರಿಸುತ್ತಾ ದೈವರಾಧನೆಗೆ ಹೆಚ್ಚು ಮಹತ್ವ ನೀಡುತ್ತಾರೆ.

ಲಾವಣಿ: ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡು ಬರುವ ಲಾವಣಿ ಸಂಪ್ರಾದಯವು ಸಾಮಾನ್ಯವಾಗಿದೆ. ಉಡುಪು ಧರಿಸಿ ಕೈಯಲ್ಲಿ ದಪ್ಪ, ತಾಳ ಹಿಡಿದು ಗಂಡಸರು, ಹೆಂಗಸರು ಪ್ರತ್ಯೇಕ ಮತ್ತು ಜೋಡಿಯಾಗಿ ಹೇಳುತ್ತಾರೆ. "ಡಪ್ಪು, ತಾಳ, ತುಂತುಣಿಗಳು ಅದಕ್ಕೆ ಸೊಗಸು ಹೆಚ್ಚಿಸುತ್ತಿದ್ದು ಸವಾಲ್-ಜವಾಬ್ ಹಕುವ ವಾದಿಪ್ರತಿವಾದಿಗಳಿಗಾಗಿ ಸ್ಪರ್ಧಿಸುವ ಆಶುಕವಿತ್ವ ಪ್ರಕಟಿಸುವ ದಿನನಿತ್ಯದ ಬದುಕನ್ನು ತಮ್ಮ ಕಾವ್ಯಮಯವಾಗಿಸಬಲ್ಲ ಒಂದೇ ಸಮನೆ ಹಾಡಬಲ್ಲ. ಇಡೀ ರಾತ್ರಿ ಹಾಡಬಲ್ಲ. ಜನರನ್ನು ಆಕರ್ಷಿಸಿ, ರಂಜಿಸುವ ಬಯಲು ಲಾವಣಿ ಮತ್ತು ಮೇಳದ ಲಾವಣಿಗಳು ಈ ಜಿಲ್ಲೆಯಲ್ಲಿದ್ದು, ಇವನು ನೀನೀ ಪದಗಳೆಂದು, ಹರದೇಶಿ-ನಾಗೇಶಿ ಕಲ್ಲಿತುರಾ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ.

ರಿವಾಯಿಲ್ ಕುಣಿತ ಮತ್ತು ಲಾವಣಿ: ಮುಸಲ್ಮಾನರ(ಸಾಮನ್) ಜನಪದ ರಂಗಕಲೆಯಾದ ರಿವಾಯತ್ ಕುಣಿತದ ೬ ರಿಂದ ೨೦ಜನ ಸದಸ್ಯರೊಳಗೊಂಡಿದ್ದು ಡಪ್ಪಹಿಡಿದು ನಾಯಕ ಹಾಡುತ್ತಿದ್ದರೆ ತಂಡವು ಪುನರುಚ್ಚರಿಸುತ್ತಾ ಕುಣಿಯುತ್ತಾರೆ. ವಿಭಿನ್ನ ಕುಣಿತಗಳಿಂದ ಮುಸ್ಲಿಂ ಸಂತರ ತತ್ವದಗಳ, ಶಿವಶರಣರ ಬದುಕಿನ ಘಟ್ಟಗಳಿಗೆ ರಾಮಾಯಣ, ಮಹಾಭಾರತಕ್ಕೆ

ಸಂಬಂಧಿಸಿದ್ದು ಸವಾಲ್ ಜವಾಬ್ ಮಾಡುತ್ತಾ ಮುಮ್ಮೇಳ ಹಿಮ್ಮೇಳ ದನಿಗೂಡಿಸಿ ಡೋಲಕ್, ಡಪ್ಪು, ಹಾರೋನಿಯಂ, ಪೀಟಿಲು, ಜಾಂಬಳಿಂದ ಬುದ್ಧಿ ಕಸರತ್ತುಗಳಿಂದ ಹಾಡುವ ಕಲಾವಿದರುಗಳಿದ್ದಾರೆ

ಲಂಬಾಣಿ ಹಾಡುಗಳು: ಮನುಷ್ಯ ತನ್ನಲ್ಲಿ ಅಡಗಿದ ಅವ್ಯಕ್ತಭಾವನೆಗಳನ್ನು ವಿಚಾರಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ದೈಹಿಕ ಕ್ರಿಯೆಯನ್ನು ಲಯಬದ್ಧವಾದ ರೀತಿಯಲ್ಲಿ ಹೊರಚೆಲ್ಲುತ್ತಾರೆ. ತಾಳ ಗತ್ತುಗಳೊಂದಿಗೆ ಮೈ ಮಣಿಸುವ ಕಲೆಯೇ ನೃತ್ಯಕಲೆ, ಲಯಬದ್ಧವಾದ ಚಲನೆಯೇ ನೃತ್ಯ, "ಹಾಡುವಿಕೆ ಹಾಗೂ ಕುಣಿಯುವಿಕೆ ಲಂಬಾಣಿಗರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಶ್ರಮಿಕರಾದ ಲಂಬಾಣಿರು ಸ್ವಾಭಿಮಾನಕ್ಕೂ ಹೆಸರಾದವರು, ಸಂಜೆ ಆದ ತಕ್ಷಣ ಗಂಡಸರು, ಹೆಂಗಸರು ತಮ್ಮ ಕುಲ ದೈವ 'ಸೇವಾಬಾಯಿ' ಯನ್ನು ಕುರಿತು ಹಾಡುತ್ತಾ ವಿವಿಧ ಭಾವಗಳಲ್ಲಿ ಕುಣಿದು ಸಂತಸವನ್ನು ಪಡುತ್ತಾರೆ. ಹೆಂಗಸರ ಹಾಡಿನಲ್ಲಿ ಕುಣಿತ ಇರಲಿಕ್ಕೆ ಬೇಕು.

ಜನಪದ ಕಲಾವಿದರು/ಹಾಡುಗಾರರು

ಜನಪದ ಸಾಹಿತ್ಯವು ಕಂಠಸ್ಥವಾಗಿ ಉಳಿದುಕೊಂಡು ಬಂದಿದ್ದು, ಜನರು ತಮ್ಮ ನೋವು ನಲಿವುಗಳನ್ನು ಹಾಡಿನ ರೂಪದಲ್ಲಿ ಕಂಠಸ್ತವಾಗಿ ಮುಂದುವರೆಸುತ್ತಿದ್ದು, ಗ್ರಾಮ ಸಂಸ್ಕೃತಿಯಲ್ಲಿ ಕಾಣುತ್ತೇವೆ. ನಮ್ಮ ಜನಪದರು ಹಾಡುಗಳ ಕಣಜವೇ ಆಗಿದ್ದು, ಶಿಶುಗೀತೆಗಳು ಗಂಡಸರ ಗೀತೆಗಳು, ಹೆಂಗಸರ ಗೀತೆಗಳ ರೂಪದಲ್ಲಿ ಹಲವು ಹತ್ತು ಸಂದರ್ಭಗಳಲ್ಲಿ ಅಂದರೆ ಜನನ-ಬಾಲ್ಯ-ವಿವಾಹ, ಮರಣ ಇತ್ಯಾದಿ. "ಹಬ್ಬ-ಹರಿದಿನ, ಜಾತ್ರೆ ಉತ್ಸವಗಳಲ್ಲಿ, ಸುಗ್ಗಿ ಶಿವರಾತ್ರಿಗಳಲ್ಲಿ ತಮ್ಮ ಕಂಚಿನ ಕಂಠದಿಂದ ಹಾಡುತ್ತಾರೆ.೧೦ ಇಡೀ ಜಿಲ್ಲೆಯಲ್ಲಿ ಇಂತಹ ಜನಪದ ಗಾಯಕರು, ಹಾಡುಗಾರರು ಅಸಂಖ್ಯಾತರಾಗಿದ್ದು, ತಮ್ಮ ಬದುಕಿನ ಬಹುಪಾಲು ಹಾಡಿನಲ್ಲಿ ಕಳೆದಿದ್ದಾರೆ.

ವೀರಗಾಸೆ : ಮಧ್ಯ ಕರ್ನಾಟಕದಲ್ಲಿ ಪ್ರಸಿದ್ಧಿಯಾದ ಗಂಡು ಕಲೆ ವೀರಗಾಸೆಯು ಗ್ರಾಮೀಣ ಜನತೆಯ ಸಾಂಸ್ಕೃತಿಕ, ಧಾರ್ಮಿಕ ಸಮ್ಮಿಲನದ ಜೀವ ಸೆಲೆ. ತನ್ನದೇ ಆದ ವೀರಧ್ವನಿ ಮೊಳಗಿಸುತ್ತಾ ಸಾಹಿತ್ಯ, ಸಂಗೀತ, ನರ್ತನಗಳು ಮುಪ್ಪುರಿಗೊಂಡಿದ್ದು, ಸಮರ ಕಲೆಯ ಹಿನ್ನಲೆವುಳ್ಳ ಕಟ್ಟಾಳುಗಳಿಗೆ ಚೈತನ್ಯ ತುಂಬುತ್ತಾ *ಪೌರಾಣಿಕ ವ್ಯಕ್ತಿಯಾದ ವೀರಭದ್ರನು ಯಜ್ಞವಿರೋಧಿಯಾಗಿದ್ದಾನೆ. ಅವನು ದಕ್ಷ ಬ್ರಹ್ಮನ ತಲೆ ಕಡಿಯುವ ಮೂಲಕ ಯಜ್ಞನಿಲ್ಲಿಸುತ್ತದೆ. ಶಿವಶರಣರು ಇಂತಹ ಬಲಿ ನೀಡಿ ಯಜ್ಞ ಮಾಡುವ ಮೌಢ್ಯತೆಯನ್ನು ಖಂಡಿಸುತ್ತಾರೆ.

ರಂಗಭೂಮಿ ಮತ್ತು ಜಾತ್ರೆಯ ಸಂಬಂಧ: ಜನಪದರ ಬದುಕು ಒಂದು ಕಲೆ, ಅವರ ಜೀವನ ಸದಾ ಚೈತನ್ಯದ ಚಿಲುಮೆಯಾಗಿದ್ದು, ಕಲೆಯೇ ಜನಪದ ಆಸ್ತಿ, ಸಂಪತ್ತು ಕೂಡಾ ಆಗಿದೆ. ಈ ಕಲೆಗಳು ಆದಿಮಾನವನ ಪ್ರಾಚೀನ ಪರಂಪರೆ ಹೊಂದಿದ್ದು ದೇವರ ಕಲ್ಪನೆಯು ಕಲೆ, ಸಾಹಿತ್ಯ, ಸಂಗೀತ, ನೃತ್ಯಗಳಿಗೆ ಮೂಲವಾಗಿವೆ ಎಂದು ನಂಬಲಾಗಿದೆ.

ಕೋಲಾಟ: ಕನ್ನಡ ನಾಡಿನಾದ್ಯಾಂತ ಕೋಲಾಟ ಜನಪ್ರಿಯ, ಖರ್ಚುರಹಿತ ಕಲೆಯಾಗಿದೆ. ಪ್ರತೀ ಹಬ್ಬ, ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಸುಗ್ಗಿ ದಿನಗಳಲ್ಲಿ ರಾತ್ರಿ ಇಡೀ ಕೋಲಾಟದಲ್ಲಿ ಮೈ ಮನಸ್ಸು ದಣಿಸುವವರಿದ್ದಾರೆ. ಹಿರಿಯರ, ಕಿರಿಯರ, ವಯಸ್ಕರ ಮಹಿಳೆಯರ ತಂಡಗಳಲ್ಲಿ ತಮ್ಮಲ್ಲೇ ಒಬ್ಬ ನಾಯಕ ನಾಯಕನಾಗಿ ಕೋಲು ಹಾಕುತ್ತಾ ಹಾಡುತ್ತಾನೆ. ಉಳಿದವರು ಅನುಸರಿಸುತ್ತಾರೆ.

ಕೀಲು ಕುದುರೆ ಕುಣಿತ: ಜನಪದ ಕಥೆಗಳಲ್ಲಿ ಕಾಲ್ಪನಿಕವಾಗಿ ಬರುವ ರಾಜ, ರಾಣಿಯರ ಸರಸ ಸಲ್ಲಾಪ, ವಿರಸ ವಿಚ್ಛೇದನಗಳನ್ನು ಕಲಿಯುಗದಲ್ಲಿ ಪ್ರತಿ ಸೃಷ್ಠಿ ಮಾಡುವ ಪಾತ್ರಗಳಾಗಿ ರಾಜ-ರಾಣಿಯರ ನೆನಪನ್ನು ತರುವಂತಹ ಕುದುರೆ ಮೇಲೆ ಸವಾರಿ ಮಾಡಿ ಸಮಸ್ಯೆ ಆಲಿಸುತ್ತಿದ್ದವರೂ ಇದ್ದರೆಂದು ಈ ಕೀಲು ಕುದುರೆ ಸವಾರರನ್ನು ನೋಡಿ ಕಲ್ಪಿಸಬಹುದು. ಆದರೆ ವಸ್ತುಶಃ ಕೋಲಿನ ಕುದುರೆ ಮುಖವಾಡ ಮಾತ್ರ ಕುದುರೆಯನ್ನು ಹೋಲುತ್ತಿದ್ದು, ಶರೀರಕ್ಕೆಲ್ಲಾ ಬಿದಿರಿನ ದಟ್ಟಿ ಹಾಗೂ ಮರದ ತಿರುಳನ್ನು ಕಾಗದದ ಗಂಜಿಯನ್ನು ಜೇಡಿಮಣ್ಣಿನಿಂದ ಸಿದ್ಧಪಡಿಸಿದ ಕುದುರೆಯ ಮುಖ ಮತ್ತು ಶರೀರದ ಆಕಾರಕ್ಕೆ (ಬುಟ್ಟಿಯಂತೆ) ಬಿದಿರನ್ನು ಹೆಣೆದು ಅದರೊಳಗೆ ವ್ಯಕ್ತಿ ಸೇರಿಕೊಂಡು ಮರಗಾಲನ್ನು ಕಟ್ಟಿಕೊಂಡು ಹೊರ ನೋಟಕ್ಕೆ ಸವಾರನಂತೆ ಕಂಡು ಬರುತ್ತಾನೆ.

ಗೊಂಬೆ ಕುಣಿತ: ಬಿದಿರಿನ ತಡಿಕೆ, ಹಗುರವಾದ ಮರ, ಕಾಗದದ

ಎರಡು ತಿರುಳನ್ನು ಅರೆದು ಮೇಣ/ಜೇಡಿ ಮಣ್ಣಿನಿಂದ ಕಲೆಸಿ ಮನುಷ್ಯನ ಆಕೃತಿಯಲ್ಲಿ ೧೦-೧೫ ಅಡಿ ಗೊಂಬೆ ತಯಾರಿಸಲಾಗುತ್ತದೆ. ಆ ಮುಖಕ್ಕೆ ಬಣ್ಣ ಬಳಿದಿದ್ದು, ಮೈ ಮೇಲೆ ಬಣ್ಣ ಬಣ್ಣದ ವಸ್ತ್ರ ತೊಡಿಸಿ ಸೊಂಟದ ಮಧ್ಯಭಾಗದಲ್ಲಿ ಸಣ್ಣ ಸಣ್ಣ ರಂಧ್ರಗಳಿದ್ದು, ಕುಣಿಯುವ ವ್ಯಕ್ತಿ ಈ ಗೊಂಬೆಗಳನ್ನು ಹೊತ್ತುಕೊಂಡು ಕುಣಿಯುತ್ತಾನೆ. ಅವನು ಕಾಣದಂತೆ ಉದ್ದನೆಯ ಬಟ್ಟೆ ಇಳಿ ಬಿಟ್ಟಿದ್ದು, ದೊಡ್ಡ ಗೊಂಬೆಗಳೇ ನರ್ತಿಸುವಂತೆ ಕಾಣುತ್ತದೆ. ಗಂಡು-ಹೆಣ್ಣು ಜೊತೆಗಿರುವ ಈ ಗೊಂಬೆಗಳು ಕೆಲವು ರಾಕ್ಷಸ ಆಕಾರದಲ್ಲೂ ಇದ್ದು, ಕಲಾವಿದರು ತಮಟೆ ಡೋಲು/ವಾಲಗದ ಜೊತೆ ಗತ್ತಿನಿಂದ ಕುಣಿಯುತ್ತಾರೆ. ಹಿಂದಕ್ಕೆ, ಮುಂದಕ್ಕೆ ಅದನ್ನು ಕಂಡು ಪ್ರೇಕ್ಷಕರು ಬೆರಗಾದರೆ ಮಕ್ಕಳು ಹೆದರುತ್ತಾರೆ. ಈ ಗೊಂಬೆಗಳು ಗ್ರಾಮದೇವತೆಗಳ ಮಕ್ಕಳೆಂದೂ ಕರೆಯುವುದುಂಟು. ಕೆಲವರು ಸೋಮಗಳೆಂದು ಕರೆಯುತ್ತಾರೆ. ಈ ಗೊಂಬೆಗಳು ಅಗಲ ಹಣೆ, ವಿಶಾಲ ಕಿವಿ ಕಣ್ಣು, ದೊಡ್ಡ ಮೂಗು, ಮುಖವಾಡಗಳಂತೂ ಭಯ, ಭಕ್ತಿ ಹುಟ್ಟಿಸುವಂತಿರುತ್ತದೆ.

ದೊಡ್ಡಾಟ/ಬಯಲಾಟ: ಬಯಲಿನಲ್ಲಿ ದೊಡ್ಡ ಅಟ್ಟವನ್ನು, ವೇದಿಕೆಯಾಗಿ ನಿರ್ಮಿಸಿ ಅಂದರೆ ಬಂಡೀ ಗಾಲಿಗಳ ಮೇಲೆ ಅಟ್ಟದಂತೆ ಹಲಗೆ ಜೋಡಿಸುತ್ತಾರೆ. ಇಂತಹ ವೇದಿಕೆ ಬಳಸಿಕೊಂಡು ನಾಟ್ಯ, ಗೀತೆ, ಗಾನ, ವಾದ್ಯ, ಬಣ್ಣ, ಸಂಗೀತ, ಚಿತ್ರವಿಚಿತ್ರ ಮುಖವರ್ಣಿಕೆ, ಸುಂದರ ವೇಷಭೂಷಣ, ಕ್ರಮಬದ್ಧ ನಾಟ್ಯಗಳನ್ನೊಳಗೊಂಡ ವಿಶಿಷ್ಟ ಕಲೆಯೇ ದೊಡ್ಡಾಟವಾಗಿದೆ.

ಕಿನ್ನರಿ ಜೋಗಿಗಳು: "ಕಿನ್ನರಿ ಜೋಗಿಗಳ ವೇಷ ಭೂಷಣ ಸುಂದರ ಮತ್ತು ಆಕರ್ಷಕ, ತಲೆಗೆ ಚಂದ್ರ ಬಿಲ್ಲೆ, ಮಣಿಕಟ್ಟು, ಮುಂಡಾಸು, ಕರಿಯ ನಿಲುವಾಗಿ, ಪಂಚೆ, ಕೊರಳಿಗೆ ನೇತಾಡುವ ಮುತ್ತಿನ ಸರಗಳು, ರುದ್ರಾಕ್ಷಿ ಹಾರ, ಕಿವಿಗಳಿಗೆ ಕರ್ಣ ಕುಂಡಲ, ಕಾಪಾಲಿ ಹಣೆಯಲ್ಲಿ ವಿಭೂತಿ, ಅರ್ಧ ಚಂದ್ರನಾಮ, ಕಾಲಿಗೆ ಗೆಜ್ಜೆ, ಕೈಯಲ್ಲಿ ಕಿನ್ನಾರಿ." ಅದು ಹೇಗೆಂದರೆ ಮೂರು ಮೊಳ ಉದ್ದನೆ ಗಳುವಿಗೆ ೩ ಸೋರೆಕಾಯಿ ಎರಡು ದೊಡ್ಡದು. ಒಂದು ಚಿಕ್ಕದು ಹೀಗೆ ಹಿನ್ನಲೆ ವಾದ್ಯವೂ ಆಕರ್ಷಕ, ಇಂಪುಗಾನ ಹೊರಡಿಸುತ್ತದೆ. ಎಡಗೈ ಹೆಬ್ಬೆರಳಿಗೆ ಗಗ್ಗರ, ಕಿರು ಗೆಜ್ಜೆಯಿಂದ ಹಾಡುತ್ತಾ ಕುಣಿಯುವ, ನರ್ತಿಸುವ ಇವರ ಹಾಡಿನ ದಾಟಿ ವಿಶಿಷ್ಟವಾಗಿರುತ್ತದೆ. ಅನೇಕ ಹಾಡ್ಗತೆಗಳನ್ನು ಹೇಳುವ ಇವರು ಹರಪನಹಳ್ಳಿ ಹಾಗು ಮತ್ತಿಹಳ್ಳಿ, ಜಗಳೂರು ತಾಲ್ಲೂಕು, ಬಿಷ್ಟಹಳ್ಳಿ ಮೊದಲಾದಕಡೆ ನೆಲೆಸಿದ್ದಾರೆ.

ಹುಲಿವೇಶ: ಮೊಹರಂ ಹಾಗೂ ಜಾತ್ರೆ ಉರುಸುಗಳು, ಹುಲಿಯವೇಶ ಧರಿಸಿ ಕುಣಿಯುವುದು. ಮನರಂಜನೆಗಾಗಿ, ದೇವರ ಸೇವೆಗಾಗಿ, ಹೊಟ್ಟೆ ಪಾಡಿಗಾಗಿ ಅದಕಲ್ಲೂ ಸಮವಯಸ್ಕರೇ ಈ ತಂಡದಲ್ಲಿರುತ್ತಾರೆ. ಹನುಮ ಚಡ್ಡಿ ಧರಿಸಿ ಮೈಗೆ ಕೆಂಪು ಮಿಶ್ರಿತ ಹಳದಿ ಪಟ್ಟೆ, ಮುಖಕ್ಕೆ ಹುಲಿ ಮುಖವಾಡ, ಇಲ್ಲವೇ ಹುಲಿಯಂತೆ ಬಳಿದು, ತಮಟೆ ವಾದಕ್ಕೆ ತಕ್ಕಗತ್ತಿನಿಂದ ಹುಲಿಯಂತೆ ಹೊಂಕರಿಸುವ, ಜಿಗಿಯುವ, ಬಣ್ಣ ಕುಪ್ಪಳಿಸುವ ಮಕ್ಕಳನ್ನು ಬೆಚ್ಚಿ ಬೀಳಿಸುವ ಅಭಿನಯ ಮಾಡುತ್ತಾರೆ. ಹುಲಿವೇಶ ಕಲೆಯು ಹಿಂದೂ ಮುಸ್ಲಿಂರಲ್ಲಿ ಸೌಹಾರ್ದತೆ ಮೂಡಿಸುವ ಕಲೆಯಾಗಿದೆ. ಜಿಲ್ಲೆಯ ಮಹಮ್ಮದೀಯ ನಂತರ ಆಸಾಪಾಸಿನ ಊರುಗಳಲ್ಲಿ ನಂದ್ಯಾಲ, ಕುಂಚೂರು, ಹರಪನಹಳ್ಳಿ, ಬಾತಿ, ಬಸವಾಪಟ್ಟಣ, ಜಗಳೂರು, ಚನ್ನಗಿರಿ ಹೀಗೆ ಹಲವೆಡೆ ಇಂತಹ ಹುಲಿವೇಶ ಹಾಕುವವರಿದ್ದಾರೆ.

ಗೊಂದಲಿಗರ ಮೇಳ: ವೃತ್ತಿಗಾಯಕರಾದ ಇವರು ಆದಿಶಕ್ತಿ ಆರಾಧಕರು. ಇವರಲ್ಲಿ ಅನೇಕ ಒಳಪಂಗಡ ಇದ್ದು, ಗೊಂದಲ ಹಾಕುವುದು. ಮತೀಯ ಇವರ ಆಚರಣೆಯಾಗಿದೆ. ಸಮಾಳ, ತುಂತುಣಿ, ಕೈ ತಾಳಗಳ ಮೇಳದೊಂದಿಗೆ ೩ ಜನ ಕಲಾವಿದರೊಂದಿಗೆ ಚೌಡಿಕೆ ಹಿಡಿದು ಕಥೆ ಹೇಳುತ್ತಾರೆ. ಆಟದ ನಿರೂಪಕ ನಾಟಕೀಯವಾಗಿ ಕಥೆಯನ್ನು ಮುಂದುವರಿಸುತ್ತಾನೆ. ಅಂದರೆ ಆತ ನಟ, ನಿರೂಪಕ, ಭಾಗವತ, ನರ್ತಕ, ಸೂತ್ರಧಾರ ಎಲ್ಲವೂ ಆಗಿರಬೇಕು. ಇವರ ರಸವತ್ತಾದ ಕಥಾನಕಗಳನ್ನು ಎಲ್ಲೆಡೆ ಕೇಳುತ್ತಾರೆ. ಚನ್ನಗಿರಿ ಪಕ್ಕ ವಡ್ನಾಳನಲ್ಲಿ ಇಂತಿಹ ಕಲಾವಿದರು ನೆಲೆಸಿದ್ದಾರೆ.

ಕೊಂಬು ಕಹಳೆ: ಕೊಂಬನ್ನು ಹೋಲುವ ಗಾಳಿ ವಾದ್ಯವಾಗಿದ್ದು, ರಂಧ್ರಕ್ಕೆ ತುಟಿಯಿಂದ ಜೋರಾಗಿ ಊದಿದಾಗ ಕಂಪನ-ನಾದ ಉಂಟಾಗುತ್ತದೆ. ಇತ್ತೀಚೆಗೆ ಹಿತ್ತಾಳೆ ಮೊದಲಾದ ಲೋಹಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಅರ್ಧ ಚಂದ್ರಾಕೃತಿ, ಎಸ್. ಆಕಾರಗಳ ಕಹಳೆ ಇದಾಗಿದ್ದು ಶತ್ರುಗಳ ಬಗ್ಗೆ ಜಾಗೃತಿ ಮೂಡಿಸಲು ಹಿಂದೆ ಬಳಸಲಾಗುತ್ತಿದ್ದು ಈಗ ದೇವರ ಹೆಸರಲ್ಲಿ ಈ ಸೇವೆ ಮಾಡುವರು ಜಿಲ್ಲೆಯಲ್ಲಿ ಇಂತಹ ಅನೇಕ ವಾದ್ಯಗಾರರು ಇದ್ದಾರೆ.

ಉ. ದೊಂಬಿ ದಾಸರ ಮೇಳ: ಲೌಕಿಕ ಸಂಪ್ರದಾಯದ ವೃತ್ತಿಗಾಯಕರಾದ ಇವರು ಜನರನ್ನು ರಂಜಿಸುತ್ತಾರೆ. ಬಲಗೈಲಿ ಏಕತಾರಿ ಹಿಡಿದು ಎಡಗೈಲಿ ಚಿಟಿಕೆ ಹಾಕುತ್ತಾ ಅನೇಕ ಚಾರಿತ್ರಿಕ ಲೌಕಿಕ, ಪೌರಣಿಕ ಕಥೆ ಹಾಡುತ್ತಾ ಗಂಗೆ-ಗೌರಿ ಜಗಳ ಅಭಿನಯಿಸುವ ಕಥೆಗೆ ಊರಿಗೆ ಊರೇ ಸೇರುತ್ತದೆ. ಚನ್ನಗಿರಿ, ಜಗಳೂರು ತಾಲೂಕಿನ ಬಂಗಾರಿ ಗುಡ್ಡದಲ್ಲಿ ಇವರು ನೆಲೆಸಿದ್ದು

ಇವರ ಕಲೆ ಇಂದು ಮೂಲೆ ಸೇರಿದೆ. ಜನಪ್ರಿಯ ಬಯಲಾಟಗಳನ್ನು ಈಗ ಆಡುತ್ತಿಲ್ಲ ಇದನ್ನು ಸಂಚಾರಿ ಬಯಲಾಟ, ರಂಗಭೂಮಿ, ದಾಸರ ಆಟ ಎಂದು ಕರೆಯುವರು.

ಬಹುರೂಪಿ/ವೇಶಗಾರರು: ಹಗಲಿನಲ್ಲಿ ಪೌರಾಣಿಕ ಪಾತ್ರಗಳನ್ನು ಹಾಕಿಕೊಂಡು ೩, ೫, ೭ ೯ ದಿನ ಹೀಗೆ ಅವಧಿಯಂತೆ ರಾಮಾಯಣ, ಮಹಾಭಾರತದ ವಸ್ತು, ಹಾಡು, ವೇಷಭೂಷಣ ಕುಣಿತದೊಂದಿಗೆ ಜನರನ್ನು ರಂಜಿಸುತ್ತಾ ಊರಾಡುತ್ತಾರೆ. ತಮ್ಮ ಉಡುಗೆ, ತೊಡುಗೆ ತಾವೇ ಸಿದ್ಧಪಡಿಸಿಕೊಂಡು ಹಾರೋನಿಯಂ, ತಬಲಗಳೊಂದಿಗೆ ಸಂಗೀತ ಪ್ರಧಾನ ಕಥಾ ಪ್ರಸಂಗವನ್ನು ಸಂಕ್ಷಿಪ್ತವಾಗಿ ಅಭಿನಯಿಸುತ್ತಾರೆ. ಪ್ರೇಕ್ಷಕರು ಇರುವಲ್ಲಿಗೆ ಹೋಗಿ ನಾಟಕ ನೋಡಿದ ಅನುಭವ ನೀಡುತ್ತಾರೆ. ಇವರ ಪಾತ್ರಕ್ಕೆ ತಕ್ಕ ವೇಶ ಭೂಷಣ, ಸಂಭಾಷಣೆ ಹಾಡು ಕುಣಿತ, ಭಾಷಾ ಶೈಲಿ, ಅಂಗಿಕ ಅಭಿನಯ, ಹಾಸ್ಯ ಜನರಿಗೆ ಅಚ್ಚರಿ ಮೂಡಿಸುತ್ತದೆ. ಇವರು ಆಗಾಗ ಸಂಚಾರಿಗಳಾಗಿದ್ದು, ಹರಪನಹಳ್ಳಿ, ಹರಿಹರ ಹೊನ್ನಾಳಿ, ಜಗಳೂರು, ಮೊದಲಾದ ಕಡೆ ತಾತ್ಕಾಲಿಕ ನಿವಾಸಿಗಳಾಗಿದ್ದಾರೆ. ಇವರ ಈ ಕಲೆ ಸಂಚಾರಿ ರಂಗಭೂಮಿ ಎಂದು ಕರೆಯಲಾಗಿದೆ.

ಆಶು ಕವಿಗಳು: ಸಿದ್ಧನ ಮಠದ ಯುಗ ಧರ್ಮ ರಾಮಣ್ಣ, ಹೊನ್ನಾಳಿಯ ಬಸವರಾಜ್, ಯುವರಾಜ್, ಚಿದಾನಂದಮೂರ್ತಿ, ಮಲ್ಲಪ್ಪ ಮೊದಲಾದ ಆಶು ಕವಿಗಳು ಹಬ್ಬ. ವಿವಾಹ, ಜಾತ್ರೆಗಳಲ್ಲಿ, ಖಾಸಗಿ ಸಮಾರಂಭಗಳಲ್ಲಿ ತಮ್ಮ ಕವಿತ್ವ ಪ್ರದರ್ಶಿಸುತ್ತಾರೆ.

ಶಿವತಾಂಡವ ನೃತ್ಯ: ವೀರಶೈವ ಪಂಥದ ಕಲೆಯಾಗಿರುವ ಶಿವತಾಂಡವ ನೃತ್ಯವನ್ನು ಅಣಕು ಆನಗೋಡು, ಗಂಗನಕಟ್ಟೆ, ಬಾವಿಹಾಳು, ಮತ್ತು ಸುತ್ತಲಿನ ಕೆಲ ಗ್ರಾಮಗಳಲ್ಲಿ ಕಾಣುತ್ತೇವೆ.

ಈವರೆಗೆ ಹೇಳಿದ ಕಲಾವಿದರ ಕಲೆಗಳ ಪ್ರದರ್ಶನಗಳಲ್ಲದೆ, ಬುಡುಕಿಯವರು, ಹೆಳವರು, ಕರಪಲ್ಲವಿಯವರು, ಹಾವಾಡಿಗರು, ಕೌಲೆತ್ತು ಆಟ, ಕರಡಿ ಕುಣಿತ, ಜೋಗಪ್ಪ, ಜೋಗಮ್ಮ ಹರಿಕಥೆ ಹೇಳುವುದು ಪುರಾಣ ಕೀರ್ತನ, ಗಮಕ ವಾಚನ ಮಾಡುವ ಕಲಾವಿದರೂ ಇದ್ದಾರೆ. ಅಲ್ಲದೆ ಸುಗಮ ಸಂಗೀತ, ಹಿಂದೂಸ್ತಾನಿ ಸಂಗೀತಗಾರರು, ವರಸೆಗಳ ವೀರರು, ಕುಸ್ತಿ, ಕಲಿಗಳು ಹಾಗೂ ನಗರದ ಆರೆಸ್ಟ್ರಾ, ಹಾಸ್ಯ ತಂಡ, ಭರತನಾಟ್ಯ, ನೂಪುರ ನೃತ್ಯ ಮೊದಲಾದ ಶಿಷ್ಟ ಹಾಗೂ ಜನಪದ ಕಲಾವಿದರು ತಮ್ಮ ಕಲೆಯ ಭವ್ಯ ಪ್ರದರ್ಶನ ನೀಡುವ ಜನ ಸಮುದಾಯದ ಮೈ-ಮನ ತಣಿಸುವ ಕಲೆಗಳು ಜೀವಂತಿಕೆಯಿಂದ ಕೂಡಿವೆ.

ಉಪಸಂಹಾರ

ಜಾತ್ರೆಗಳು ಬಹು ಹಿಂದಿನಿಂದಲೂ ಆಚರಿಸಲ್ಪಡುತ್ತಿದ್ದು, ದೇಶ-ವಿದೇಶಗಳಲ್ಲಿ ನಿತ್ಯ ಆಚರಿಸುತ್ತಾರೆ. ಅವು ಅಲ್ಲಿನ ಜನಾಂಗದ ರೀತಿ ರಿವಾಜುಗಳಿಗೆ ತಕ್ಕಂತೆ ಪ್ರತಿಬಿಂಬಿತ 'ವಾಗುತ್ತಿದ್ದು, ಈ ಜಾತ್ರೆಗಳು ಕಲೆಗಳಿಗೆ-ಕಲಾವಿದರಿಗೆ, ಉತ್ತಮ ಅವಕಾಶ ನೀಡುವುದು ಸಂತಸವೇ ಸರಿ, ಈ ಜಾತ್ರೆಗಳಲ್ಲಿನ ಮೂಕ ಪ್ರಾಣಿಗಳ ಬಲಿ ನೀಡುವಿಕೆ ಮಾನವತಾವಾದಿ, ವಿಚಾರವಾದಿಗಳ ತಳಮಳಕ್ಕೂ ಕಾರಣವಾಗಿದೆ. ಇತ್ತೀಚೆಗೆ ಜಾತ್ರೆಗಳು ಸಂಕೀರ್ಣ ವಾಗುತ್ತಿದ್ದು ಸಾಂಸ್ಕೃತಿಕ ಅನನ್ಯತೆಯಿಂದ ಕೂಡಿವೆ ಮತ್ತು ಸಮುದಾಯದ ಸ್ಥಿತಿಗತಿಗೆ ತಕ್ಕಂತೆ, ನಂಬಿಕೆ ಸಂಪ್ರದಾಯ-ಸಾಂಸ್ಕೃತಿಕ ಅಂಶಗಳು ಭಿನ್ನವಾಗುತ್ತಾ ಹೋಗುತ್ತವೆ. ಕರ್ನಾಟಕದಲ್ಲಿ ದಾವಣಗೆರೆ ಜಿಲ್ಲೆ ಚಾರಿತ್ರಿಕವಾಗಿ, ಐತಿಹಾಸಿಕವಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ, ವಿಶೇಷವಾಗಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದು, ಜಾತ್ರೆಗಳ ಕುರಿತ ಅಧ್ಯಯನ ಇಂದು ರಾಷ್ಟ್ರಮಟ್ಟದಲ್ಲಿ ಮಹತ್ವ ಪಡೆಯುತ್ತಿದೆ. ಇಲ್ಲಿ ಸ್ತ್ರೀ-ಪುರುಷ ದೇವತೆಗಳ ಜಾತ್ರೆಗಳು ನಡೆಯುತ್ತಿದ್ದು, ಪ್ರತಿಯೊಂದು ಆಚರಣೆ, ನಂಬಿಕೆ, ಹರಕೆ, ಸಂಪ್ರದಾಯಗಳಿಗೆ ವಿಶೇಷ ಮಹತ್ವವಿದ್ದು. ಅಲ್ಲದೆ ಸ್ಥಳೀಯ ಸಂಸ್ಕೃತಿಗಳ ಅನಂತ ಮುಖಗಳನ್ನು ಗುರ್ತಿಸುವುದಕ್ಕಾಗಿ ಕೇವಲ ದಾವಣಗೆರೆ ಜಿಲ್ಲೆಗೆ ಮಾತ್ರ ಅನೇಕ ಸೀಮಿತಗೊಳಿಸಲಾಗಿದೆ.

ಬುಡುಕಿಯವರು, ಹೆಳವರು, ಕರಪಲ್ಲವಿಯವರು, ಹಾವಾಡಿಗರು, ಕೌಲೆತ್ತು ಆಟ, ಕರಡಿ ಕುಣಿತ, ಜೋಗಪ್ಪ, ಜೋಗಮ್ಮ ಹರಿಕಥೆ ಹೇಳುವುದು ಪುರಾಣ ಕೀರ್ತನ, ಗಮಕ ವಾಚನ ಮಾಡುವ ಕಲಾವಿದರೂ ಇದ್ದಾರೆ. ಅಲ್ಲದೆ ಸುಗಮ ಸಂಗೀತ, ಹಿಂದೂಸ್ತಾನಿ ಸಂಗೀತಗಾರರು, ವರಸೆಗಳ ವೀರರು, ಕುಸ್ತಿ, ಕಲಿಗಳು ಹಾಗೂ ನಗರದ ಆರೆಸ್ಟ್ರಾ, ಹಾಸ್ಯ ತಂಡ, ಭರತನಾಟ್ಯ, ನೂಪುರ ನೃತ್ಯ ಮೊದಲಾದ ಶಿಷ್ಟ ಹಾಗೂ ಜನಪದ ಕಲಾವಿದರು ತಮ್ಮ ಕಲೆಯ ಭವ್ಯ ಪ್ರದರ್ಶನ ನೀಡುವ ಜನ ಸಮುದಾಯದ ಮೈ-ಮನ ತಣಿಸುವ ಕಲೆಗಳು ಜೀವಂತಿಕೆಯಿಂದ ಕೂಡಿವೆ.

ಆಧಾರ ಗ್ರಂಥಗಳು

೧. ಜಾನಪದ ಕಲೆಗಳ ಕೋಶ, ಪು-೧೫೫/೧೫೬ ಪ್ರಸಾರಾಂಗ, ಕನ್ನಡ ೧೮. ವಿಶ್ವವಿದ್ಯಾಲಯ, ಹಂಪಿ

೨. ಬಿ. ಎನ್. ಸ್ವಾಮಿ, ಜಾನಪದ ಐಸಿರಿ, ಪು-೮೨೭೮

೩. ಡಾ. ಪಿ. ಕೆ. ಖಂಡೋಬ, ಕರ್ನಾಟಕದ ಲಂಬಾಣಿಗಳು, ಪು-೧೮೦

೪. ಓ.ಬಿ. ಬೋರಲಿಂಗಯ್ಯ, ಜಾನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ